# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ.8458/2011

| | |
|---|---|
| ಸಾಕ್ಷಿದಾರರ ಹೆಸರು : | ಬಾಲಕೃಷ್ಣ |
| ತಂದೆಯ ಹೆಸರು : | ತಿಮ್ಮಯ್ಯ |
| ವಯಸ್ಸು : | 45 ವರ್ಷ |
| ಉದ್ಯೋಗ : | ಕಬಾಬ್ ಅಂಗಡಿ |
| ವಾಸ : | ತಾವರೆಕೆರೆ, ಬೆಂಗಳೂರು. |

**ದಿನಾಂಕ 15.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿರಿಯ ಸ.ಸ.ಅ ರವರಿಂದಃ**

1. ಚಾಸಾ-1 ರವರು ಕೃತಿ ಬಾರ್ ಆ್ಯಂಡ್ ರೆಸ್ಟೊರೆಂಟ್ ನಲ್ಲಿ ಕ್ಯಾಶಿಯರ್ ಆಗಿ ಕೆಲಸ ಮಾಡುತ್ತಿದ್ದರು. ಚಾಸಾ-2 ರವರು ಯಾರೆಂದು ನನಗೆ ಗೊತ್ತಿಲ್ಲ. 2009 ರಲ್ಲಿ ಒಂದು ದಿನ ರಾತ್ರಿಯಲ್ಲಿ ಕೃತಿ ಬಾರ್ ನಲ್ಲಿ ಗಲಾಟೆಯಾಗಿತ್ತು, ಆಗ ನಾನು ನನ್ನ ಅಂಗಡಿಯಲ್ಲೆ ಇದ್ದೆ, ಆದ್ದರಿಂದ ಘಟನೆಯನ್ನು ನೋಡಲಿಲ್ಲ. ಮರುದಿನ ಬೆಳಿಗ್ಗೆ 08.30 ಗಂಟೆಗೆ ಪೊಲೀಸರು ಬಂದು ಗಲಾಟೆಯಾದ ಬಗ್ಗೆ ವಿಚಾರಣೆ ಮಾಡಿದರು. ಚಾಸಾ-1 ರವರೇ ಘಟನಾ ಸ್ಥಳವನ್ನು ತೋರಿಸಿದರು. ಆ ಸಮಯದಲ್ಲಿ ನಾನು ಪಕ್ಕದ ನನ್ನ ಅಂಗಡಿಯಲ್ಲಿ ಇದ್ದೆ. ಪೊಲೀಸರು ಸಾಕ್ಷಿಯಾಗಿ ನನ್ನ ಸಹಿ ಪಡೆದಿದ್ದಾರೆ. ಸಾಕ್ಷಿಯು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು**. ಪೊಲೀಸರು ಸ್ಥಳದಿಂದ ಒಂದು ಮಚ್ಚು ಮತ್ತು ಬೆಲ್ಟ ನ್ನು ತೆಗೆದುಕೊಂಡು ಹೋಗಿರುತ್ತಾರೆ. **ಸಾಕ್ಷಿ ನೋಡಿ ಗುರುತಿಸಿದ ಚಿಕ್ಕ ಮಚ್ಚನ್ನು ಮತ್ತು ಬೆಲ್ಟನ್ನು ಮೂಮ-1 ಮತ್ತು ಮೂಮ-2 ಎಂದು ಗುರುತಿಸಲಾಯಿತು.**

(ಈ ಹಂತದಲ್ಲಿ ಹಿ.ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಹಿ.ಸ.ಸ.ಆ ರವರಿಂದಃ**

2. ದಿನಾಂಕ 25/09/2009 ರಂದು ಬೆಳಿಗ್ಗೆ 08.10 ರಿಂದ 09.00 ಗಂಟೆಯವರೆಗೆ ಕೃತಿ ಬಾರ್ ಆ್ಯಂಡ್ ರೆಸ್ಟೂರೆಂಟ್ ಒಳಗಡೆ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪೊಲೀಸರು ನನ್ನ ಮತ್ತು ನಾಗೇಶ ರವರ ಸಮಕ್ಷಮ ಪಂಚನಾಮೆ ಮಾಡಿ ನನ್ನ ಮತ್ತು ನಾಗೇಶ ರವರ ಸಹಿ ಪಡೆದುಕೊಂಡಿದ್ದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

3. ಕಬಾಬ್ ಅಂಗಡಿಯನ್ನು ನಾನು ಸಾಮಾನ್ಯವಾಗಿ ರಾತ್ರಿ ಸಮಯದಲ್ಲಿ ಓಪನ್ ಮಾಡುತ್ತೇನೆ ಎಂದರೆ ಸರಿ. ಕೃತಿ ಬಾರನ್ನು ಸಾಮಾನ್ಯವಾಗಿ ಬೆಳಿಗ್ಗೆ 10.00 ಗಂಟೆಗೆ ಓಪನ್ ಮಾಡುತ್ತಾರೆ ಎಂದರೆ ಸರಿ. ಬೆಳಿಗ್ಗೆ 08.00 ಗಂಟೆಗೆ ಬಾರನ್ನು ತೆರೆದರು ಅಬಕಾರಿ ಇಲಾಖೆಯವರು ಸೀಜ್ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಅಲ್ಲಿಗೆ ಬಂದ ಪೊಲೀಸರ ಹೆಸರುಗಳನ್ನು ಮತ್ತು ಅವರ ಹುದ್ದೆಗಳನ್ನು ನನಗೆ ಹೇಳಲು ಸಾಧ್ಯವಿಲ್ಲ. ಕೃತಿ ಬಾರ್ ಪಕ್ಕದಲ್ಲಿ ಕಬಾಬ್ ನಡೆಸುತ್ತಿದ್ದುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೂಮ-1 ಮತ್ತು 2 ರ ಮೇಲೆ ಪೊಲೀಸರು ನನ್ನ ಸಹಿಯನ್ನು ಪಡೆದುಕೊಂಡಿಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)
ಮು.ಮ.ದಂ.ನ್ಯಾ.ಬೆಂ.ನಗರ.